# 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

**ಸಿ. ಸಿ. ನಂ.4444/2022**

**ಫಿರ್ಯಾದಿ :** ಶ್ರೀ ಮಹದೇವಪ್ಪ ಬಿನ್ ಪುಟ್ಟಸ್ವಾಮಿ
33 ವರ್ಷ, ಶ್ರೀರಾಂಪುರ, 1 ನೇ ಮೇನ್
5 ನೇ ಕ್ರಾಸ್ , ನಂಜನಗೂಡು

**ವಿರುದ್ಧ**

**ಆರೋಪಿ :** ಶ್ರೀ ವಿ ಸುನೀಲ್ ಬಿನ್ ವಸಂತಕುಮಾರ ಎಂ ಆರ್
30 ವರ್ಷ, # 3276, 12 ನೇ ಕ್ರಾಸ್
ಆರ್ ಪಿ ರಸ್ತೆ, ನಂಜನಗೂಡು.

## ಅ. ಪ್ರ. ಸಂ. ಕಲಂ 313ರನ್ವಯ ಆರೋಪಿಯ ಹೇಳಿಕೆ

**ಪ್ರಶ್ನೆ 1ಃ** ನೀವು ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರ ಃ

**ಪ್ರಶ್ನೆ 2ಃ** ಪ್ರಾಸಾ-1 ಶ್ರೀ ಮಹದೇವಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ಆರೋಪಿಯಾದ ನೀವು ಮತ್ತು ಫಿರ್ಯಾದುದಾರರು ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ನಿಮ್ಮ ಕಾನೂನುಬದ್ದ ಅವಶ್ಯಕತೆಗಳಿಗಾಗಿ ಹಾಗು ಗೃಹಕೃತ್ಯದ ಖರ್ಚಿಗಾಗಿ ದಿಃ10.09.2021 ರಂದು ಪ್ರಾಸಾ-1 ರವರಿಂದ ರೂ.2,19,000/- ಗಳನ್ನು ಸಾಲವಾಗಿ ಪಡೆದುಕೊಂಡು, ಸದರಿ ಸಾಲವನ್ನು 3 ತಿಂಗಳ ಒಳಗೆ ಮರುಪಾವತಿ ಮಾಡುವುದಾಗಿ ಒಪ್ಪಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

**ಪ್ರಶ್ನೆ 3** ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀವು ಸದರಿ ರೂ 2,19,000/- ಸಾಲದ ಬಾಬ್ತುವಿಗೆ ನೀವು ನಿಮ್ಮ ಉಳಿತಾಯ ಖಾತೆಯಿರುವ ಬ್ಯಾಂಕ್ ಆಫ್ ಬರೋಡ, ಶ್ರೀಕಂಠಪುರಿ ಶಾಖೆಯ ಚಕ್ ನಂಃ 000018 ಕ್ಕೆ ರೂ.2,19,000/-ಗಳನ್ನು ದಿನಾಂಕಃ 07.01.2022 ಎಂದು ನಮೂದಿಸಿ ಫಿರ್ಯಾದುದಾರರ ಹೆಸರಿಗೆ ನೀಡಿದ್ದು, ತದನಂತರ ಪಿರ್ಯಾದುದಾರರು ಸದರಿ ಚಕ್ಕುಗಳನ್ನು ನಗದೀಕರಿಸಿಕೊಳ್ಳಲು ಉಳಿತಾಯ ಖಾತೆಯಿರುವ ಕರ್ನಾಟಕ ಬ್ಯಾಂಕ್, ಆರ್ ಪಿ ರೋಡ್ ಬ್ರಾಂಚ್, ನಂಜನಗೂಡು ಶಾಖೆಯ ಬ್ಯಾಂಕಿನ ಮೂಲಕ ದಿಃ11.02.2022 ರಂದು ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು " ಸಾಕಷ್ಟು ಹಣವಿಲ್ಲ" ಎಂಬ ಹಿಂಬರಹದೊಂದಿಗೆ ದಿಃ 14.02.2022 ರಂದು ನಗಧೀಕೃತಗೊಳ್ಳದೆ

ವಾಪಸ್ಸು ಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

**ಪ್ರಶ್ನೆ 4** ಪ್ರಾಸಾ-1 ರವರು ಮುಂದುವರೆದು ಪಿರ್ಯಾದಿ ಪರ ವಕೀಲರ ಮೂಲಕ ದಿಃ21.02.2022 ರಂದು ಕಾನೂನು ರೀತ್ಯಾ ನೋಟಿಸನ್ನು ನೀಡಿದ್ದು, ಸದರಿ ನೋಟೀಸು ದಿಃ 22.02.2022 ರಂದು ಆರೋಪಿಗೆ ಜಾರಿಯಾಗಿದ್ದು, ಆದರೂ ಸಹಾ ಹಣವನ್ನು ಮರುಪಾವತಿ ಮಾಡದೆ ಕಲಂ 138 ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಪ್ರಕಾರ ಅಪರಾಧ ಮಾಡಿರುವಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

**ಪ್ರಶ್ನೆ 5** ನಿಮಗೆ ಇನ್ನೂ ಏನಾದರೂ ಹೇಳುವುದು ಇದೆಯಾ?

ಉತ್ತರ ಃ

**ಪ್ರಶ್ನೆ 6ಃ** ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡುವಿರಾ ?

ಉತ್ತರ ಃ

ಫಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ 24.01.2026 ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.
ನಂಜನಗೂಡು.